KABC030597492018

Presented on : 13-08-2018
Registered on : 13-08-2018
Decided on : 04-04-2026
Duration : 7 years, 7 months, 22 days

IV ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು ನಗರ

ಉಪಸ್ಥಿತರುಃ ಶ್ರೀ ಸೋಮನಾಥ ಬಿ.ಎ.(ಲಾ) ಎಲ್‌ಎಲ್.ಬಿ.
IV ನೇ ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿ,
ಬೆಂಗಳೂರು ನಗರ.

ದಿನಾಂಕಃ 4ನೇ ತಾರೀಖು ಏಪ್ರಿಲ್ 2026

ಸಿಸಿ ಸಂಖ್ಯೆಃ 22105/2018

ದೂರುದಾರರು - ರಾಜ್ಯದ ಪರ ಇಂದಿರಾನಗರ ಪೊಲೀಸ್ ಠಾಣೆ,
ಬೆಂಗಳೂರು ನಗರ.

(ಹಿ.ಸ.ಸ. ಅಭಿಯೋಜಕರು)

- ವಿರುದ್ಧ -

ಆರೋಪಿ : ಅಜಿತ್, 26 ವರ್ಷ
ಬಿನ್. ಸಂಜೀವ್,
ವಾಸಃ ಕುಕ್ಕೆಹಳ್ಳಿ ಗ್ರಾಮ ಮತ್ತು ಅಂಚೆ,
ಉಡುಪಿ ತಾಲ್ಲೂಕು ಮತ್ತು ಜಿಲ್ಲೆ.

(ಆರೋಪಿಯ ಪರ ಶ್ರೀ ಎಂ.ಎಂ.ಎ. ವಕೀಲರು)

ಕೃತ್ಯ ನಡೆದ ದಿನಾಂಕ	-	28-06-2017
ಕೃತ್ಯದ ಬಗ್ಗೆ ವರದಿಯಾದ ದಿನಾಂಕ	-	10-01-2018
ಫಿರ್ಯಾದಿಯ ಹೆಸರು	-	ಶ್ರೀ ಜಯಂತ್ ದೌರ
ಸಾಕ್ಷಿಗಳ ಸಾಕ್ಷ್ಯವನ್ನು ದಾಖಲಿಸಲು ಆರಂಭಿಸಿದ ದಿನಾಂಕ	-	13-12-2022
ಸಾಕ್ಷಿಗಳ ಸಾಕ್ಷ್ಯವನ್ನು ದಾಖಲಿಸಲು ಅಂತ್ಯಗೊಳಿಸಿದ ದಿನಾಂಕ	-	26-02-2026
ಆಪಾದಿಸಲು ಆರೋಪಣೆಗಳು	-	ಭಾ. ದಂ. ಸಂಹಿತೆಯ ಕಲಂ 408 ಹಾಗೂ 420 ರಡಿ
ನ್ಯಾಯಾಧೀಶರ ನಿರ್ಣಯ ಒಪ್ಪಿಕೊಂಡಿದ್ದಾರೆಯೇ	-	ಆರೋಪಿಯು ನಿರ್ದೋಷಿ

******

- ತೀರ್ಪು -

ಇಂದಿರಾನಗರ ಪೋಲೀಸ್ ಠಾಣೆಯ ಪೋಲೀಸ್ ಇನ್ಸಪೆಕ್ಟರ್ ರವರು ಪ್ರಕರಣದ ತನಿಖೆ ಮಾಡಿ ಆರೋಪಿಯ ವಿರುದ್ಧ ಭಾ. ದಂ. ಸಂಹಿತೆಯ ಕಲಂ 408 ಹಾಗೂ 420 ರಡಿ ಶಿಕ್ಷಾರ್ಹವಾದ ಅಪರಾಧಗಳಿಗಾಗಿ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಪ್ರಕರಣದ ಸಂಕ್ಷಿಪ್ತ ಸಂಗತಿಗಳು ಈ ಕೆಳಕಂಡಂತಿವೆಃ

ಆರೋಪಿಯು ದಿನಾಂಕಃ 28.08.2015 ರಿಂದ ದಿನಾಂಕಃ 05.10.2016 ರ ವರೆಗೆ ಇಂದಿರಾನಗರ ಪೊಲೀಸ್ ಠಾಣಾ ಸರಹದ್ದಿನ ಸಿ.ಎಂ.ಹೆಚ್. ರಸ್ತೆಯ ಬಿಲ್ಡಿಂಗ್ ನಂ.40

ರಲ್ಲಿರುವ ಬಾಟಾ ಇಂಡಿಯಾ ಲಿಮಿಟೆಡ್ ನಲ್ಲಿ ಬ್ರಾಂಚ್ ಮ್ಯಾನೇಜರ್ ಹುದ್ದೆಯಲ್ಲಿ ಕರ್ತವ್ಯಕ್ಕೆ ನೇಮಕಗೊಂಡಿದ್ದು, ಆ ಅವಧಿಯಲ್ಲಿ ಆರೋಪಿಯು ಕಂಪನಿಯ ವ್ಯವಹಾರವನ್ನು ಮರೆಮಾಚಿದ್ದು ಈ ಬಗ್ಗೆ ಕಂಪನಿಯವರು ಸಾಕ್ಷಿ-6 ರವರಿಂದ ದಿನಾಂಕಃ 05.10.2016 ರಂದು ಆಡಿಟಿಂಗ್ ನಡೆಸಿದಾಗ ಕಂಪನಿಯಲ್ಲಿ 1,35,247/- ರೂ. ಗಳಷ್ಟು ಸ್ಟಾಕ್ ಕಡಿಮೆ ಹಾಗೂ ನಗದು ಹಣ 31,889/- ರೂ. ಗಳಷ್ಟು ಕಡಿಮೆ ಬಂದಿದ್ದು, ಆರೋಪಿಯು ಆ ಸಮಯದಲ್ಲಿ ಕಂಪನಿಗೆ ಸಂಬಂಧಿಸಿದ ಒಟ್ಟು 1,67,136/- ರೂ. ಗಳಷ್ಟು ಹಣವನ್ನು ಆರೋಪಿಯು ಸ್ವಂತಕ್ಕೆ ಉಪಯೋಗಿಸಿಕೊಂಡು ಕಂಪನಿಗೆ ನಂಬಿಕೆ ದ್ರೋಹವೆಸಗಿ ಮೋಸ ಮಾಡಿರುತ್ತಾರೆ.

3. ಆರೋಪಿಯು ಜಾಮೀನಿನ ಮೇಲಿದ್ದು, ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಭಾ. ದಂ. ಸಂಹಿತೆಯ ಕಲಂ 408 ಹಾಗೂ 420 ರಡಿ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ದೋಷಾರೋಪಣಾ ಪಟ್ಟಿ ಮತ್ತು ಅಭಿಯೋಜನೆಯ ದಾಖಲೆಗಳ ನಕಲುಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರಡಿಯಲ್ಲಿ ಆರೋಪಿಗೆ ನೀಡಲಾಯಿತು. ಆರೋಪಗಳಲ್ಲಿ ಭಾ. ದಂ. ಸಂಹಿತೆಯ ಕಲಂ 408 ಹಾಗೂ 420 ರಡಿಯಲ್ಲಿ ದೋಷಾರೋಪಿಸುವಷ್ಟು ಅಂಶಗಳನ್ನೊಳಗೊಂಡಿದ್ದರಿಂದ, ಸದರಿ ಕಲಂ ಗಳಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ, ಆರೋಪಿಗೆ ಓದಿ ವಿವರಿಸಿ ಹೇಳಲಾಗಿ, ಅವರು ಆ ಆರೋಪಗಳನ್ನು ನಿರಾಕರಿಸಿ, ವಿಚಾರಣೆಯಾಗಬೇಕೆಂದು ಕೋರಿದ್ದರ ಮೇರೆಗೆ ವಿಚಾರಣೆಯನ್ನು ನಡೆಸಲಾಯಿತು.

4. ಅಭಿಯೋಜನೆಯು ಆರೋಪಿಯ ವಿರುದ್ಧ ದೋಷಾರೋಪಣೆಯನ್ನು ಸಾಬೀತುಪಡಿಸಲು ಚಾ.ಸಾ.2 ರವರನ್ನು ಪ್ರಾಸಾ.1 ಎಂದು, ಚಾ.ಸಾ.4 ರವರನ್ನು ಪ್ರಾಸಾ.2 ಎಂದು, ಚಾ.ಸಾ.7 ರವರನ್ನು ಪ್ರಾಸಾ.3 ಎಂದು ಹಾಗೂ ಚಾ.ಸಾ.9 ರವರನ್ನು ಪ್ರಾಸಾ.4 ಎಂದು ವಿಚಾರಣೆ ಮಾಡಿ, ದಾಖಲೆಗಳನ್ನು ನಿಪಿ.1 ರಿಂದ ನಿಪಿ.12 ಎಂದು ಗುರುತಿಸಿಕೊಂಡಿರುತ್ತಾರೆ. ಚಾ.ಸಾ.1, ಚಾಸಾ-3 ರಿಂದ ಚಾಸಾ-6 ಹಾಗೂ ಚಾಸಾ-8 ರವರ ಹಾಜರಾತಿಗೆ ಸಾಕಷ್ಟು ಬಾರಿ ಸಮನ್ಸ್, ವಾರೆಂಟ್ ಹಾಗೂ ಉದ್ಘೋಷಣಾ ವಾರೆಂಟ್ ಹೊರಡಿಸಿದ್ದರೂ ಸಹ ಹಾಜರಾಗದ ಕಾರಣ ಅವರ ಸಾಕ್ಷ್ಯವನ್ನು ಕೈಬಿಡಲಾಗಿರುತ್ತದೆ. ನಂತರ ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

5. ಅಭಿಯೋಜನೆಯ ಪರವಾಗಿ ಸಾಕ್ಷಿ ವಿಚಾರಣೆಯಾದ ನಂತರ ಅಪರಾಧ ಪ್ರಕ್ರಿಯಾ ಸಂಹಿತೆ 313 ರಡಿಯ ಹೇಳಿಕೆಯನ್ನು ರಚಿಸಿ ಅಭಿಯೋಜನಾ ಸಾಕ್ಷಿದಾರರ ಸಾಕ್ಷ್ಯದಲ್ಲಿ ಕಂಡುಬಂದ ದಂಡನಾರ್ಹ ಅಂಶಗಳನ್ನು ಆರೋಪಿಗೆ ಓದಿ ಹೇಳಿ ಅವರು ನೀಡಿದ ಉತ್ತರವನ್ನು ದಾಖಲು ಮಾಡಿಕೊಳ್ಳಲಾಯಿತು. ಆರೋಪಿಯ ಸಾಕ್ಷ್ಯ ವಿಚಾರಣೆ ಮಾಡಿಸಿಲ್ಲ.

6. ಉಭಯ ಪಕ್ಷಕಾರರ ಪರ ವಾದವನ್ನು ಆಲಿಸಲಾಯಿತು.

7. ಕಡತದ ಮೇಲೆ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿದವುಃ

1) ಆರೋಪಿಯು ದಿನಾಂಕಃ 28.08.2015 ರಿಂದ ದಿನಾಂಕಃ 05.10.2016 ರವರೆಗೆ ಇಂದಿರಾನಗರ ಪೊಲೀಸ್ ಠಾಣಾ ಸರಹದ್ದಿನ ಸಿ.ಎಂ.ಹೆಚ್. ರಸ್ತೆಯ ಬಿಲ್ಡಿಂಗ್ ನಂ.40 ರಲ್ಲಿರುವ ಬಾಟಾ ಇಂಡಿಯಾ ಲಿಮಿಟೆಡ್ ನಲ್ಲಿ ಬ್ರಾಂಚ್ ಮ್ಯಾನೇಜರ್ ಹುದ್ದೆಯಲ್ಲಿ ಕರ್ತವ್ಯಕ್ಕೆ ನೇಮಕಗೊಂಡಿದ್ದು, ಆ ಅವಧಿಯಲ್ಲಿ ಆರೋಪಿಯು ಕಂಪನಿಯ ವ್ಯವಹಾರವನ್ನು ಮರೆಮಾಚಿದ್ದು ಈ ಬಗ್ಗೆ ಕಂಪನಿಯವರು ಸಾಕ್ಷಿ-6 ರವರಿಂದ ದಿನಾಂಕಃ 05.10.2016 ರಂದು ಆಡಿಟಿಂಗ್ ನಡೆಸಿದಾಗ ಕಂಪನಿಯಲ್ಲಿ 1,35,247/- ರೂ. ಗಳಷ್ಟು ಸ್ಟಾಕ್ ಕಡಿಮೆ ಹಾಗೂ ನಗದು ಹಣ 31,889/- ರೂ. ಗಳಷ್ಟು ಕಡಿಮೆ ಬಂದಿದ್ದು ಆರೋಪಿಯು ಆ ಸಮಯದಲ್ಲಿ ಕಂಪನಿಗೆ ಸಂಬಂಧಿಸಿದ ಒಟ್ಟು 1,67,136/- ರೂ. ಗಳಷ್ಟು ಹಣವನ್ನು ಆರೋಪಿಯು ಸ್ವಂತಕ್ಕೆ ಉಪಯೋಗಿಸಿಕೊಂಡಿದ್ದು, ಕಾರಣ ಭಾ.ದಂ.ಸಂ ಕಲಂ 408 ರಡಿಯಲ್ಲಿ ಅಪರಾಧಗಳನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸಿದ್ದಾರೆಯೆ?

2) **ಅದೇ ದಿನಾಂಕ ಸಮಯ ಮತ್ತು ಸ್ಥಳದಲ್ಲಿ ಆರೋಪಿಯು ಕಂಪನಿಗೆ ಸಂಬಂಧಿಸಿದ ಒಟ್ಟು 1,67,136/- ರೂ. ಗಳಷ್ಟು ಹಣವನ್ನು ಆರೋಪಿಯು ಸ್ವಂತಕ್ಕೆ ಉಪಯೋಗಿಸಿಕೊಂಡು ಕಂಪನಿಗೆ ನಂಬಿಕೆ ದ್ರೋಹವೆಸಗಿ ಮೋಸ ಮಾಡಿದ್ದು, ಕಾರಣ ಭಾ.ದಂ.ಸಂ ಕಲಂ 420 ರಡಿಯಲ್ಲಿ ಅಪರಾಧಗಳನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸಿದ್ದಾರೆಯೆ?**

3) **ಏನು ಆದೇಶ?**

8. ಮೇಲ್ಕಂಡ ಅಂಶಗಳಿಗೆ ಕೆಳಕಂಡಂತೆ ಚರ್ಚಿಸಲಾದ ಕಾರಣಗಳಿಗಾಗಿ ಈ ಮುಂದಿನಂತೆ ಉತ್ತರಿಸಲಾಗಿದೆ.

ಅಂಶ – 1 ಹಾಗೂ 2 : ನಕಾರಾತ್ಮಕವಾಗಿ

ಅಂಶ - 3 : ಅಂತಿಮ ಆದೇಶದಂತೆ

ಕಾ ರ ಣ ಗ ಳಿ ಗಾ ಗಿ

9. **ಅಂಶ 1 ಹಾಗೂ 2:-** ಈ ಎರಡು ಅಂಶಗಳು ಪರಸ್ಪರ ಆಂತರಿಕ ಸಂಬಂಧವನ್ನು ಹೊಂದಿರುವುದರಿಂದ ವಸ್ತುಸ್ಥಿತಿ ಹಾಗೂ ಕಾರಣಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅಂಶ 1 ಹಾಗೂ 2 ನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

10. ದಿನಾಂಕ 05.10.2016 ರಂದು ಸಿಎಂ ಹೆಚ್ ರಸ್ತೆಯ ಬಿಲ್ಡಿಂಗ್ ನಂ.40 ರ ಬಾಟಾ ಇಂಡಿಯಾ ಲಿಮಿಟೆಡ್ ನ್ನು ಚಾಸಾ-6 ರವರ ಮೂಲಕ ಆಡಿಟ್ ಮಾಡಿಸಿದಾಗ ದಿನಾಂಕ 28.08.2015 ರಿಂದ 05.10.2016 ರಲ್ಲಿ ಅದರ ಬ್ರಾಂಚ್ ಮ್ಯಾನೇಜರ್ ಆಗಿದ್ದ ಆರೋಪಿಯ ಕರ್ತವ್ಯದ ಅವಧಿಯಲ್ಲಿ ರೂ.1,35,247/- ರ ಸ್ಟಾಕ್ ಹಾಗೂ ರೂ.31,889/- ನಗದು ಹಣ ಕಡಿಮೆ ಬಂದಿದ್ದು, ಒಟ್ಟಾಗಿ ರೂ.1.67,136/- ಹಣವನ್ನು ಆರೋಪಿ ತನ್ನ ಸ್ವಂತಕ್ಕೆ ದುರುಪಯೋಗಪಡಿಸಿ ನಂಬಿಕೆ ದ್ರೋಹವೆಸಗಿದ್ದಾರೆಂದು ಆಪಾದಿಸಲಾಗಿದೆ.

11. ಈ ಪ್ರಕರಣದಲ್ಲಿ ಬಾಟಾ ಇಂಡಿಯಾ ಲಿಮಿಟೆಡ್ ನ ಆಕ್ಟಿವ್ ರಿಟೈರ್ಡ್ ಮ್ಯಾನೆಜರ್ ರಾದ ಚಾಸಾ-1 ಜಯಂತ್ ದೌರಾ ರವರು ಆರೋಪಿಯ ವಿರುದ್ಧ ದೂರು ನೀಡಿರುತ್ತಾರೆ. ಆಡಿಟರ್ ಜಯರಾಮ್ ರವರನ್ನು ಚಾಸಾ-6 ಎಂದು ದೋಷಾರೋಪಣಾ ಪಟ್ಟಿಯಲ್ಲಿ ಕಾಣಿಸಲಾಗಿದೆ. ಈ ಪ್ರಕರಣವನ್ನು ರುಜುವಾತು ಪಡಿಸಲು ಚಾಸಾ-1 ಜಯಂತ್ ದೌರಾ ಹಾಗೂ ಚಾಸಾ-6 ಆಡಿಟರ್ ಜಯರಾಮ್ ರವರ ಸಾಕ್ಷ್ಯವು ಅತ್ಯಂತ ಮಹತ್ವ

ಪೂರ್ಣವಾಗಿರುತ್ತದೆ. ಚಾಸಾ-1 ಮತ್ತು 6 ರವರಿಗೆ ನ್ಯಾಯಾಲಯ ಸಮನ್ಸ್, ವಾರೆಂಟ್ ಹಾಗೂ ಉದ್ಘೋಷಣಾ ವಾರೆಂಟ್ ಗಳನ್ನು ಹೊರಡಿಸಿದರೂ ಸಹ ಸಾಕ್ಷ್ಯ ವಿಚಾರಣೆಗೆ ಹಾಜರಾಗದ ಕಾರಣ ಅವರ ಸಾಕ್ಷ್ಯ ವಿಚಾರಣೆಯನ್ನು ಕೈಬಿಡಲಾಗಿರುತ್ತದೆ.

12. ಅಭಿಯೋಜನೆಯವರು ಬಾಟಾ ಕಂಪನಿಯ ಆಕೌಂಟ್ ಆಫೀಸರ್ ಪುನೀತ್ ರವರನ್ನು ಸಾಕ್ಷ್ಯ ವಿಚಾರಣೆಗೆ ಒಳಪಡಿಸಿದ್ದು ಅವರು ತನ್ನ ಮುಖ್ಯ ವಿಚಾರಣೆಯಲ್ಲಿ ದಿನಾಂಕ 28.08.2015 ರಿಂದ 05.10.2016 ರ ಅವಧಿಯಲ್ಲಿ ಬಾಟಾ ಇಂಡಿಯಾ ಲಿಮಿಟೆಡ್ ನಲ್ಲಿ ಆರೋಪಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ರೂ.1,67,136/- ಹಣದ ವ್ಯತ್ಯಾಸ ಆಡಿಟ್ ನಲ್ಲಿ ಕಂಡು ಬಂದಿರುತ್ತದೆ, ನಮ್ಮ ಕಂಪನಿಯಲ್ಲಿ ಹಣ ಅಥವಾ ಸರಕು ವ್ಯತ್ಯಾಸ ಕಂಡು ಬಂದರೆ ಸ್ಟೋರ್ ಮ್ಯಾನೇಜರ್ ರವರು ಹೊಣೆಗಾರರಾಗಿರುತ್ತಾರೆ, ಆ ಹಣವನ್ನು ಮರುಪಾವತಿಸುವುದಾಗಿ ಆರೋಪಿ ಮುಚ್ಚಳಿಕೆ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ಈ ಸಾಕ್ಷಿಧಾರರು ತಮ್ಮ ಸಾಕ್ಷ್ಯದಲ್ಲಿ ಎಷ್ಟು ಮೊತ್ತದ ಸ್ಟಾಕ್ ಹಾಗೂ ಎಷ್ಟು ಹಣ ಕಡಿಮೆ ಬಂದಿದೆ ಎಂದು ನುಡಿದಿರುವುದಿಲ್ಲ. ಆಡಿಟ್ ವರದಿ ಹಾಗೂ ಸ್ಟಾಕ್ ಅಂಡ್ ಇನ್ ವೆಂಟ್ರಿ ತನಿಖಾಧಿಕಾರಿಯವರ ಮೂಲಕ ನಿಪಿ-11 ಮತ್ತು ನಿಪಿ-12 ಅಂತಾ ಗುರುತಿಸಲಾಗಿರುತ್ತದೆ. ದೂರುದಾರರು ಹಾಗೂ ಆಡಿಟರ್ ಸಾಕ್ಷ್ಯ ವಿಚಾರಣೆಗೆ ಹಾಜರಾಗದ ಕಾರಣ ಆಡಿಟ್ ವರದಿ ಹಾಗೂ ಸ್ಟಾಕ್ ಅಂಡ್ ಇನ್ ವೆಂಟ್ರಿ ಒಕ್ಕಣೆಗಳು ಇವರುಗಳ ಸಾಕ್ಷ್ಯದ

ಮೂಲಕ ರುಜವಾತು ಆಗಿಲ್ಲ. ತನಿಖಾಧಿಕಾರಿಯವರು ಕೂಡ ತನ್ನ ಸಾಕ್ಷ್ಯದಲ್ಲಿ ಆರೋಪಿ ಕೆಲಸ ಮಾಡುತ್ತಿದ್ದ 2 ವರ್ಷದ ಅವಧಿಯಲ್ಲಿ ಹಣ ಮತ್ತು ಸ್ಟಾಕ್ ದುರುಪಯೋಗಪಡಿಸಿ ಕೊಂಡಿದ್ದಾರೆ, ಆದರೆ ನಿಗದಿತ ದಿನ ಬರೆದಿಲ್ಲ ಎಂದು ನುಡಿದಿರುತ್ತಾರೆ. ಹಾಗಾಗಿ, ಯಾವ ದಿನಾಂಕಗಳ ಹಾಗೂ ಯಾವ ವಿಧದ ಎಷ್ಟೆಷ್ಟು ಸ್ಟಾಕ್ ಗಳು ಹಾಗೂ ಯಾವ ದಿನಾಂಕಗಳ ಹಣದಲ್ಲಿ ವ್ಯತ್ಯಾಸ ಇದೆ ಎಂದು ಖಚಿತ ಪಡಿಸಲು ದೂರುದಾರರು ಹಾಗೂ ಆಡಿಟರ್ ಸಾಕ್ಷ್ಯ ಅಭಿಯೋಜನೆಗೆ ಲಭ್ಯವಿಲ್ಲ. ಅದೇ ರೀತಿ, ತನಿಖಾಧಿಕಾರಿಯವರ ಸಾಕ್ಷ್ಯದಿಂದಲೂ ಯಾವ ನಿಗದಿತ ದಿನಾಂಕದಂದು ಹಣ ಮತ್ತು ಸ್ಟಾಕ್ ದುರುಪಯೋಗವಾಗಿದೆ ಎಂದು ಕಂಡು ಬಂದಿರುವುದಿಲ್ಲ. ಬಾಟಾ ಕಂಪನಿಯ ಆಕೌಂಟ್ ಆಫೀಸರ್ ಪುನೀತ್ ತನ್ನ ಪಾಟೀ ಸವಾಲಿನಲ್ಲಿ ಬಾಟಾ ಶಾಪ್ ನಲ್ಲಿ ಕೆಲಸ ಮಾಡುವವರು ಊಟಕ್ಕೆ ಹೋಗುವಾಗ ಮ್ಯಾನೇಜರ್ ಇನ್ ಚಾರ್ಜ್ ಇರುತ್ತಾರೆ ಹಾಗೂ ಮ್ಯಾನೇಜರ್ ಊಟಕ್ಕೆ ಹೋಗುವಾಗ ಸಿಬ್ಬಂದಿ ಇನ್ ಚಾರ್ಜ್ ಇರುತ್ತಾರೆ, ಮ್ಯಾನೇಜರ್ ಕೆಲಸದ ಅವಧಿಯಲ್ಲಿ ಹೊರಗಡೆ ಹೋದಾಗ ಶಾಪ್ ನಲ್ಲಿ ವ್ಯವಹಾರಗಳು ನಡೆಯುತ್ತದೆ, ನಮ್ಮ ಕಂಪನಿಯ ಯಾವ ಬ್ರಾಂಚ್ ನಲ್ಲಿ ವ್ಯತ್ಯಾಸ ಕಂಡು ಬರುತ್ತದೆ ಅಂತಾ ಭೌತಿಕವಾಗಿ ನೋಡಲಾಗುವುದಿಲ್ಲ ಹಾಗೂ ಬ್ರಾಂಚ್ ನಲ್ಲಿ ಸೇಲ್ಸ್ ಮ್ಯಾನ್ ಇಲ್ಲದ ಸಮಯ ಸರಕನ್ನು ತೆಗೆದುಕೊಂಡರೆ ವ್ಯತ್ಯಾಸ ಗೊತ್ತಾಗುವುದಿಲ್ಲ ಎಂದು ನುಡಿದಿರುತ್ತಾರೆ. ಈ ಸಾಕ್ಷ್ಯವನ್ನು ಗಮನಿಸಿದ್ದರೆ ಆರೋಪಿಯೇ ಸ್ಟಾಕ್ ಮತ್ತು ಹಣದ ವ್ಯತ್ಯಾಸಕ್ಕೆ ಕಾರಣ ಹಾಗೂ ಆ ಹಣವನ್ನು ಆರೋಪಿ ದುರುಪಯೋಗಪಡಿಸಿಕೊಂಡಿದ್ದಾರೆ

ಎಂಬ ಬಗ್ಗೆ ಸಂಶಯ ಉಂಟಾಗುತ್ತದೆ. ಈ ಸಾಕ್ಷಿಧಾರರು ತನ್ನ ಪಾಟೀ ಸವಾಲಿನಲ್ಲಿ ನಾನು ಕೇವಲ ಅಕೌಂಟ್ ವಿಭಾಗದ ಮಾತ್ರ ನೋಡಿಕೊಳ್ಳುತ್ತಿದ್ದು, ನನಗೆ ಆಡಿಟರ್ ರವರಿಂದ ಮಾಹಿತಿ ಸಿಗುತ್ತದೆ ಎಂದು ನುಡಿದಿರುವುದರಿಂದ ಈ ಸಾಕ್ಷಿಧಾರರ ಮುಖ್ಯವಿಚಾರಣೆಯಲ್ಲಿನ ಆರೋಪಿಯ ಮೇಲಿನ ಆಪಾದನೆ ಆಡಿಟರ್ ರವರ ಮಾಹಿತಿಯನ್ನು ಅವಲಂಬಿಸಿದೆ ಎಂದು ಕಂಡು ಬರುತ್ತದೆ. ಆ ರೀತಿ ಆಡಿಟರ್ ರವರ ಮಾಹಿತಿಯ ಮೇರೆಗೆ ನೀಡಿದ ಈ ಸಾಕ್ಷ್ಯವೂ ಕೂಡ ಕೂಲಂಕುಷವಾಗಿ ಪರಿಶೀಲಿಸಿದಾಗ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ.

13. ಅಭಿಯೋಜನೆಯ ಆಪಾದನೆ ಪ್ರಕಾರ ದಿನಾಂಕ 28.08.2015 ರಿಂದ 05.10.2016 ರ ಅವಧಿಯಲ್ಲಿ ಆರೋಪಿ ಸ್ಟಾಕ್ ಮತ್ತು ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆ. ಅಭಿಯೋಜನೆಯ ಪ್ರಕಾರ ದಿನಾಂಕ 05.10.2016 ರಂದು ಆಡಿಟ್ ಮಾಡಿಸಲಾಗಿದೆ. ದಿನಾಂಕ 28.06.2017 ರಂದು ಜಯಂತ್ ದೌರಾ ರವರು ಆರೋಪಿಯ ವಿರುದ್ಧ ದೂರು ನೀಡಿರುತ್ತಾರೆ. ಆರೋಪಿ ಪರ ವಕೀಲರು ಈ ಪ್ರಕರಣದಲ್ಲಿ ದೂರು ನೀಡಲು ಸಾಕಷ್ಟು ಕಾಲ ವಿಳಂಬವಾಗಿರುತ್ತದೆ ಎಂದು ವಾದಿಸಿರುತ್ತಾರೆ. ಅಕೌಂಟ್ ಆಫೀಸರ್ ಪುನೀತ್ ತನ್ನ ಪಾಟೀ ಸವಾಲಿನಲ್ಲಿ ನಮಗೆ ಕಂಪನಿಯಲ್ಲಿ ಏನಾದರೂ ಅನುಮಾನ ಕಂಡು ಬಂದರೆ ಆಡಿಟ್ ಮಾಡಿಸುತ್ತೇವೆ, ವರ್ಷಕ್ಕೆ ಎರಡು ಬಾರಿ ಆಡಿಟ್ ಮಾಡಿಸುತ್ತೇವೆ, ಕಂಪನಿಯಲ್ಲಿ ಪ್ರತಿ ವರ್ಷ ಆಡಿಟ್ ಮಾಡಿದಾಗ ವ್ಯತ್ಯಾಸ ಕಂಡು ಬರುತ್ತದೆ, ಅದೇ ರೀತಿ ತಿಂಗಳ ಸ್ಟೇಟ್ ಮೆಂಟ್ ನಲ್ಲಿ

ಚೆಕ್ ಮಾಡಿದಾಗ ವ್ಯತ್ಯಾಸ ಕಂಡು ಬರುತ್ತದೆ, ಪ್ರತಿ ತಿಂಗಳು ಶಾಪ್ ನಲ್ಲಿ ಆ ರೀತಿ ವ್ಯತ್ಯಾಸ ಕಂಡು ಬಂದಿರುವ ಸ್ಟೇಟ್ ಮೆಂಟ್ ನ್ನು ಪೋಲಿಸರಿಗೆ ಕೊಟ್ಟಿರುವ ಬಗ್ಗೆ ನೆನಪಿಲ್ಲ, ಆದರೆ ಅದರ ಪ್ರತಿ ಕಂಪನಿಯಲ್ಲಿ ಇದೆ ಎಂದು ನುಡಿದಿರುತ್ತಾರೆ. ಈ ಸಾಕ್ಷಿಧಾರರ ಸಾಕ್ಷ್ಯದ ಪ್ರಕಾರ ವರ್ಷಕ್ಕೆ ಎರಡು ಬಾರಿ ಆಡಿಟ್ ಹಾಗೂ ಪ್ರತಿ ತಿಂಗಳ ಸ್ಟೇಟ್ ಮೆಂಟ್ ಮಾಡುತ್ತಿದ್ದು, ಅದರಿಂದ ಶಾಪ್ ನಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದರೆ ಗೊತ್ತಾಗುತ್ತಿದ್ದರೂ ಸಹ ದೂರನ್ನು ನೀಡದೇ ಆಡಿಟ್ ಮಾಡಿಸಿದ 8 ತಿಂಗಳ ನಂತರ ದೂರು ನೀಡುವಲ್ಲಿ ಆದ ಕಾಲ ವಿಳಂಬಕ್ಕೆ ಯಾವುದೇ ವಿವರಣೆಯನ್ನು ಅಭಿಯೋಜನೆಯ ಸಾಕ್ಷ್ಯ ವಿಚಾರಣೆಯಲ್ಲಿ ನೀಡಿಲ್ಲ. ಆದ್ದರಿಂದ, ದೂರು ನೀಡುವಲ್ಲಿ ಆದ ಕಾಲ ವಿಳಂಬವೂ ಕೂಡ ಅಭಿಯೋಜನೆ ಪ್ರಕರಣದ ಮೇಲೆ ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ.

14. ಆರೋಪಿ ಪರ ವಕೀಲರು ಆರೋಪಿ ಬಾಟಾ ಇಂಡಿಯಾ ಲಿಮಿಟೆಡ್ ನ ಕೆಲಸ ಬಿಟ್ಟು ಹೋದ ನಂತರ ಆತನ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಲಾಗಿದೆ ಎಂದು ವಾದಿಸಿರುತ್ತಾರೆ. ಆಕೌಂಟ್ ಆಫೀಸರ್ ಪುನೀತ್ ತನ್ನ ಪಾಟೀ ಸವಾಲಿನಲ್ಲಿ ಚಾಸಾ-1 ರವರು ಅರೋಪಿತನ ಮೇಲೆ ದೂರು ಕೊಟ್ಟಾಗ ಆರೋಪಿ ಕಂಪನಿಯಲ್ಲಿ ಕೆಲಸದಲ್ಲಿ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ, ತನಿಖಾಧಿಕಾರಿಯವರು ಸಹ ಆರೋಪಿಯನ್ನು ಕೆಲಸದಿಂದ ವಜಾ ಮಾಡಿದ್ದಾರೋ ಅಥವಾ ಅವರೇ ಸ್ವತಃ ಕೆಲಸ ಬಿಟ್ಟು ಹೋಗಿದ್ದಾರೋ

ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಅದೇ ಬಾಟಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಪುನೀತ್ ರವರು ಅಥವಾ ಈ ಪ್ರಕರಣದ ತನಿಖಾಧಿಕಾರಿಯವರು ಆರೋಪಿಯ ಮೇಲೆ ಸ್ಟಾಕ್ ಮತ್ತು ಹಣದ ವ್ಯತ್ಯಾಸದ ಆಪಾದನೆ ಮಾಡಿದಾಗ ಕರ್ತವ್ಯದಲ್ಲಿ ಇದ್ದರೋ ಅಥವಾ ಕೆಲಸ ಬಿಟ್ಟಿದ್ದರೋ ಎಂಬುದನ್ನು ತಿಳಿಸಬೇಕಿತ್ತು, ಆದರೆ ಈ ಬಗ್ಗೆ ಯಾವುದೇ ಸಾಕ್ಷ್ಯ ಇಲ್ಲ. ಅದೇ ರೀತಿ ಪುನೀತ್ ರವರು ತನ್ನ ಪಾಟೀ ಸವಾಲಿನಲ್ಲಿ ಆರೋಪಿಯ ವಿರುದ್ಧ ದೂರು ದಾಖಲಿಸುವುದಕ್ಕಿಂತ ಹಿಂದೆ ಕಂಪನಿಯಲ್ಲಿ ವ್ಯತ್ಯಾಸ ಕಂಡು ಬಂದ ಬಗ್ಗೆ ನೋಟೀಸ್ ಕೊಟ್ಟಿರುವುದಿಲ್ಲ, ಆತ ಒಪ್ಪಿಕೊಂಡಿದ್ದಾನೆ ಎಂದು ನುಡಿದಿರುತ್ತಾರೆ. ಆರೋಪಿ ಕಂಪನಿಯ ಸಮಕ್ಷಮ ತಪ್ಪನ್ನು ಒಪ್ಪಿಕೊಂಡಿದ್ದಾರೆ ಎಂಬ ಬಗ್ಗೆ ಯಾವ ಪುರಾವೆ ಇಲ್ಲ. ಮೇಲಿನ ಸಾಕ್ಷ್ಯವನ್ನು ಅವಲೋಕಿಸಿದಾಗ ಆರೋಪಿ ಕೃತ್ಯ ಎಸಗಿರುವ ಬಗ್ಗೆ ಸಂಶಯ ಉಂಟಾಗುತ್ತದೆ.

15. ಆರೋಪಿ ಸ್ಟಾಕ್ ಮತ್ತು ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ರುಜುವಾತು ಪಡಿಸಲು ಸಾಕಷ್ಟು ಸಾಕ್ಷಾಧಾರಗಳು ಇಲ್ಲವಾದ ಕಾರಣ ಸ್ಥಳ ಪಂಚನಾಮೆಗೆ ಸಂಬಂಧಿಸಿದಂತೆ ಬಾಟಾ ಶೋ ರೂಂ ನ ಉದ್ಯೋಗಿ - ದೃವರಾಜ್ ರವರ ಸಾಕ್ಷ್ಯ ಹಾಗೂ ಆರೋಪಿಯನ್ನು ಉಡುಪಿಯಿಂದ ಕರೆದದುಕೊಂಡು ಬಂದು ತನಿಖಾಧಿಕಾರಿಯವರ ಮುಂದೆ ಹಾಜರುಪಡಿಸಿರುವುದಾಗಿ ನುಡಿದಿರುವ ಎಎಸ್ಐ ಸುರೇಶ್ ರವರ ಸಾಕ್ಷ್ಯ ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ರೀತಿ ಉಪಯುಕ್ತವಾಗುವುದಿಲ್ಲ. ತನಿಖಾಧಿಕಾರಿಯವರು ಮುಖ್ಯ

ವಿಚಾರಣೆಯಲ್ಲಿ ದೂರುದಾರರ ಲಿಖಿತ ದೂರು ಪಡೆದುಕೊಂಡು ಪ್ರಕರಣ ದಾಖಲಿಸಿ ಸ್ಥಳ ಮಹಜರ್ ಮಾಡಿ ದೂರುದಾರರು ಹಾಜರುಪಡಿಸಿದ ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಂಡು ಸಾಕ್ಷಿಧಾರರ ಹೇಳಿಕೆಗಳನ್ನು ದಾಖಲಿಸಿ ದೋಷಾರೋಪಣಾಪಟ್ಟಿಯನ್ನು ಸಲ್ಲಿಸಿರುವುದಾಗಿ ನುಡಿದಿದ್ದರೂ ಪಾಟೀ ಸವಾಲಿನಲ್ಲಿ ನಾನು ಬಾಟಾ ಕಂಪನಿಗೆ ಖುದ್ದಾಗಿ ಹೋಗಿ ಪರಿಶೀಲನೆ ಮಾಡಿಲ್ಲ ಎಂದು ನುಡಿದಿರುತ್ತಾರೆ. ಈ ಸಾಕ್ಷ್ಯವನ್ನು ಗಮನಿಸಿದರೆ ತನಿಖಾಧಿಕಾರಿಯವರು, ದೂರುದಾರರು ಹಾಜರುಪಡಿಸಿದ ದಾಖಲೆಗಳ ಆಧಾರದ ಮೇಲೆ ಆರೋಪಿಯ ವಿರುದ್ಧ ದೋಷಾರೋಪಣಾಪಟ್ಟಿ ಸಲ್ಲಿಸಿರುವುದಾಗಿ ಕಂಡು ಬರುತ್ತದೆ. ಅಭಿಯೋಜನಾ ಪ್ರಕರಣ ಸಾಕ್ಷ್ಯಾಧಾರಗಳಿಂದ ರುಜುವಾತಾಗದ ಕಾರಣ ತನಿಖಾಧಿಕಾರಿಯವರ ಸಾಕ್ಷ್ಯವೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ರೀತಿ ಉಪಯುಕ್ತವಾಗುವುದಿಲ್ಲ.

16. ಕಡತದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರದಿಂದ ಅಭಿಯೋಜನೆಯು ಆರೋಪಿಯ ಮೇಲೆ ಹೊರಿಸಿದ ದಂ. ಪ್ರ. ಸಂಹಿತೆಯ ಕಲಂ 408 ಹಾಗೂ 420 ರ ಆಪಾದನೆಯನ್ನು ರುಜುವಾತುಪಡಿಸುವಲ್ಲಿ ವಿಫಲವಾಗಿರುತ್ತದೆ. ಈ ಕಾರಣದಿಂದ ಸಂಶಯದ ಲಾಭ ನೀಡಿ ಆರೋಪಿಯನ್ನು ಈ ಪ್ರಕರಣದಿಂದ ಬಿಡುಗಡೆಗೊಳಿಸಲು ನಿರ್ಧರಿಸಿ **ಅಂಶ ನಂ.1 ಹಾಗೂ 2 ನ್ನು ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

17. **<u>ಅಂಶ-3:</u>** ಅಂಶ ನಂ.1 ಹಾಗೂ 2 ನ್ನು ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಗಿನಂತೇಃ

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಭಾ. ದಂ. ಸಂಹಿತೆಯ ಕಲಂ 408 ಹಾಗೂ 420 ರಡಿ ಶಿಕ್ಷಾರ್ಹ ಅಪರಾಧಗಳಿಗಾಗಿ ಆರೋಪಿಯನ್ನು ನಿರಪರಾಧಿಯೆಂದು ನಿರ್ಣಯಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿಯ ಮತ್ತು ಜಾಮೀನುದಾರರ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ಅಳವಡಿಸುವಂತೆ ಉಕ್ತಲೇಖನ ಕೊಟ್ಟಿದ್ದು ಅವರು ಅದನ್ನು ಗಣಕಯಂತ್ರಕ್ಕೆ ಅಳವಡಿಸಿ, ತೆಗೆದುಕೊಟ್ಟ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ **ದಿನಾಂಕಃ 04-04-2026** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ).

(ಸೋಮನಾಥ)
IV ನೇ ಹೆಚ್ಚುವರಿ ಮುಖ್ಯ ನ್ಯಾಯಿಕ
ದಂಡಾಧಿಕಾರಿ, ಬೆಂಗಳೂರು ನಗರ.

<u>ಅ ನು ಬಂ ಧ</u>

<u>1. ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಗಳುಃ</u>

ಪ್ರಾ.ಸಾ.1	-	ಧೃವರಾಜ್	-	ಹೇಳಿಕೆ ಸಾಕ್ಷಿ
ಪ್ರಾ.ಸಾ.2	-	ಪುನೀತ್	-	ಹೇಳಿಕೆ ಸಾಕ್ಷಿ
ಪ್ರಾ.ಸಾ.3	-	ಸುರೇಶ್	-	ತನಿಖಾಧಿಕಾರಿ
ಪ್ರಾ.ಸಾ.4	-	ರವಿ.ಪಿ.	-	ತನಿಖಾಧಿಕಾರಿ

<u>2. ಅಭಿಯೋಜನೆ ಪರ ಗುರುತಿಸಲಾದ ನಿಶಾನೆಗಳುಃ</u>

ನಿಪಿ.1	-	ಸ್ಥಳ ಪಂಚನಾಮೆ	-	ಪ್ರಾಸಾ-1
ನಿಪಿ.1(ಎ)	-	ಪ್ರಾಸಾ-1 ರವರ ಸಹಿ		

ನಿಪಿ.2	-	ದೂರು	-	ಪ್ರಾಸಾ-4
ನಿಪಿ.2(ಎ)	-	ಪ್ರಾಸಾ-4 ರವರ ಸಹಿ		
ನಿಪಿ.3	-	ಪ್ರಥಮ ವರ್ತಮಾನ ವರದಿ	-	ಪ್ರಾಸಾ-4
ನಿಪಿ.3(ಎ)	-	ಪ್ರಾಸಾ-4 ರವರ ಸಹಿ		
ನಿಪಿ.4	-	ಅಗ್ರಿಮೆಂಟ್ ನ ನೈಜ ಪತಿ	-	ಪ್ರಾಸಾ-4
ನಿಪಿ.5	-	ಇಂಟರ್ ವ್ಯೂ ಇವೆಲ್ಯೂಷನ್ ಫಾರಂ ನ ನೈಜ ಪ್ರತಿ	-	ಪ್ರಾಸಾ-4
ನಿಪಿ.6	-	ಆರೋಪಿಯ ರಸ್ಯೂಮ್ ನ ನೈಜ ಪ್ರತಿ	-	ಪ್ರಾಸಾ-4
ನಿಪಿ.7-8	-	10 ನೇ ತರಗತಿ ಹಾಗೂ ಪಿಯುಸಿ ಅಂಕಪಟ್ಟಿಗಳ ನೈಜ ಪ್ರತಿಗಳು	-	ಪ್ರಾಸಾ-4
ನಿಪಿ.9-10	-	ಪಾನ್ ಕಾರ್ಡ್ ಹಾಗೂ ಮತದಾರರ ಗುರುತಿನ ಚೀಟಿಯ ನೈಜ ಪ್ರತಿಗಳು	-	ಪ್ರಾಸಾ-4
ನಿಪಿ.11	-	ಆಡೀಟ್ ಕನ್ಫರ್ಮೇಷನ್ ಲೆಟರ್	-	ಪ್ರಾಸಾ-4
ನಿಪಿ.12	-	ವರದಿಯ ನೈಜ ಪ್ರತಿ	-	ಪ್ರಾಸಾ-4

3. ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಗಳುಃ

ಇಲ್ಲ

4. ಆರೋಪಿಯ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ

ಇಲ್ಲ

5. ಆರೋಪಿಯ ಪರ ಗುರುತಿಸಲಾದ ನಿಶಾನೆಃ

ಇಲ್ಲ

SOMANATHA

Digitally signed by SOMANATHA
Date: 2026.04.04 17:20:27 +0530

IV ನೇ ಹೆಚ್ಚುವರಿ ಮುಖ್ಯ ನ್ಯಾಯಿಕ
ದಂಡಾಧಿಕಾರಿ, ಬೆಂಗಳೂರು ನಗರ.